Mis 7/22 ಪಿ .ಡಬ್ಲ್ಯೂ-1

ದಿನಾಂಕಃ 04.03.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ಯಾವ ಕಾರಣಕ್ಕೆ ಅರ್ಜಿ ಸಲ್ಲಿಸಿರುತ್ತೀರ ಎಂದರೆ ನಮ್ಮ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು. ಯಾರ ವಿರುದ್ಧ ಅರ್ಜಿ ಸಲ್ಲಿಸಿರುತ್ತೀರ ಎಂದರೆ ಅಣ್ಣೇಗೌಡ, ನಾಗರಾಜ. ಒ.ಎಸ್.152/14 ವಜಾ ಆಗಿತ್ತು ಎಂದರೆ ನಾನು ಹುಷಾರಿಲ್ಲದೆ ಆಸ್ಪತ್ರೆಗೆ ಹೋಗಿದ್ದೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿ ನೀಡಿದ್ದೀರ ಎಂದರೆ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುವುದಿಲ್ಲ ಕೇವಲ ಚಿಕಿತ್ಸೆ ಪಡೆದುಕೊಂಡು ಬಂದಿರುತ್ತೇನೆ. ಯಾವಾಗ ಆರೋಗ್ಯ ಸರಿಯಿರಲಿಲ್ಲ ಎಂದರೆ ತಿಂಗಳಿಗೊಮ್ಮೆ ಹುಷಾರು ತಪ್ಪುತ್ತಿದ್ದೆ. ಆಸ್ಪತ್ರೆಯಲ್ಲಿ ನೀಡಿರುವ ಚೀಟಿಯನ್ನು ಹಾಜರುಪಡಿಸಿದ್ದೀರ ಎಂದರೆ ಮನೆಯಲ್ಲಿರುತ್ತದೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿ.04.09.2015 ರಿಂದ 18.07.2022 ರವರೆಗೂ ಒ.ಎಸ್.152/14 ರಲ್ಲಿ ನಾನು ಹಾಜರಾಗದ ಕಾರಣ ವಜಾ ಆಗಿರುತ್ತದೆ ಎಂದರೆ ಅಪಘಾತದಲ್ಲಿ ಕಾಲಿಗೆ ಪೆಟ್ಟಾಗಿರುವ ಕಾರಣ ಬಂದಿರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

2. ನನಗೆ ಜಮೀನಿರುತ್ತದೆ. ಅಲ್ಲಿ ಕೆಲಸ ಮಾಡುತ್ತೇನೆ. ಅಲ್ಲಿ ಜೋಳ ಶುಂಠಿಯನ್ನು ಬೆಳೆಯುತ್ತೇನೆ. ಸದರಿ ಜಮೀನಿನಲ್ಲಿ ನಾನು ಕೆಲಸ ಮಾಡುತ್ತೇನೆ ಎಂದರೆ ನನ್ನ ಮಗ ಮಾಡುತ್ತಾನೆ. ಟ್ರ್ಯಾಕ್ಟರ್ ಇರುತ್ತದೆ. ನನ್ನ ಮಗ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಮಗ ಟ್ರ್ಯಾಕ್ಟರ್ ನಲ್ಲಿ ಹುಕ್ಕೆ ಹೊಡೆಯುವ ಕೆಲಸ ಮಾಡುತ್ತೇನೆ ಎಂದರೆ ಸರಿ. ನನ್ನ ಮಗ ಕೆಲಸಕ್ಕೆ ಹೋದಾಗ ನಾನು ಕೆಲಸ ಮಾಡುತ್ತೇನೆ. ಉದ್ದೇಶಪೂರ್ವಕವಾಗಿ ದಾವೆಯಲ್ಲಿ ನಾನು ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. 7 ವರ್ಷ ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಒ.ಎಸ್.132/14 ರಲ್ಲೂ

ನಾವು ಹಾಜರಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಈ ಅರ್ಜಿಯಲ್ಲಿ ಪರಿಹಾರ ಹೊಂದಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.